ಕಥೆ

ಡಾ. ಮಿರ್ಜಾ ಬಷೀರ್

ಕಲೆ: ಸಂತೋಷ್ ಸಸಿಹಿತ್ಲು

ಶವದ ಮೆರವಣಿಗೆ

ಅದೊಂದು ರಾಕ್ಷಸ ನಗರ. ವಿಶಾಲವಾಗಿ ಸಮುದ್ರದಂತೆ ಹಬ್ಬಿ ನಿಂತಿತ್ತು. ಅತಿ ಶ್ರೀಮಂತರ ಜೊತೆ ದಿನಕ್ಕೊಪ್ಪತ್ತು ಊಟಕ್ಕೂ ದಿಕ್ಕಿಲ್ಲದ ನಿರ್ಗತಿಕರು ಅಲ್ಲಿದ್ದರು. ಒಬ್ಬರಿಗೊಬ್ಬರು ಸಂಬಂಧವಿಲ್ಲದಂತೆ ಬದುಕಿದ್ದರು. ಕೋಟಿಗೂ ಹೆಚ್ಚಿದ್ದ ಜನರನ್ನು ಸಾಕಿ ಸಲಹಿ ನಗರ ಬಳಲಿ ಹೋಗಿತ್ತು. ಸಾರ್ಸ್, ಕೋಳಿ ಜ್ವರ ಆಗಾಗ ಗುಟುರು ಹಾಕುತ್ತಿದ್ದವು. ಕೊರೋನಾ ಧಮಕಿ ಹಾಕಿ ಹೋಗಿತ್ತು. ಸಕ್ಕರೆ ರೋಗ, ಅಸ್ತಮಾ, ಥೈರಾಯಿಡ್‌ಗಳು ಜನರನ್ನು ಬದುಕಲೂ ಬಿಡದೆ, ಸಾಯಲೂ ಬಿಡದೆ ಸತಾಯಿಸುತ್ತಿದ್ದವು. ಹಾರ್ಟ್ ಅಟ್ಯಾಕ್ ಅಂತೂ ಪ್ರತಿ ನಿಮಿಷದ ಹಿಂದೆ ನಿಂತಿರುತ್ತಿತ್ತು. ಜನರ ಆರೋಗ್ಯ ಶಿಕ್ಷಣ ಪ್ರೀತಿ ಪ್ರೇಮ ಮದುವೆ ಧರ್ಮ ದೇವರು ಪೂಜೆಗಳೆಲ್ಲ ವ್ಯಾಪಾರದ ಸರಕಾಗಿದ್ದವು. ಪ್ರಾರ್ಥನಾ ಸ್ಥಳಗಳು ದ್ವೇಷ, ಹೊಡೆದಾಟದ ತಾಣಗಳಾಗಿದ್ದವು. ಆಳುವ ವರ್ಗ ಕೇಡುಗಳನ್ನು ಪೋಷಿಸುತ್ತ ಜನರನ್ನು ನಿರಂತರ ಆತಂಕದಲ್ಲಿಟ್ಟಿತ್ತು. ಜನರಲ್ಲಿ ಪ್ರೀತಿ, ದಯೆ, ತಾಳ್ಮೆ, ವಿಶ್ವಾಸಗಳು ಮಾಯವಾಗಿ ಬದುಕು ತನ್ನ ಘನತೆಯನ್ನು ಕಳೆದುಕೊಂಡಿತ್ತು. ದೂರದರ್ಶನ, ಮೊಬೈಲು ಮತ್ತು ಪತ್ರಿಕೆಗಳು ಟಿಆರ್‌ಪಿ ಮತ್ತು ಪ್ರಸಾರ ಹೆಚ್ಚಿಸಿಕೊಳ್ಳಲು ಕ್ಷಣಕ್ಕೊಂದು ರೋಚಕ ಸುಳ್ಳನ್ನು, ವದಂತಿಯನ್ನು ಹುಟ್ಟು ಹಾಕುತ್ತಿದ್ದವು. ಅವು ಜನರಲ್ಲಿ ಪ್ರಭುತ್ವಕ್ಕೆ ಬೇಕಾದ ಅಭಿಪ್ರಾಯವನ್ನು ರೂಪಿಸುವಲ್ಲಿ 24x7 ನಿರತವಾಗಿದ್ದವು. 'ಏನಕೇನ ಪ್ರಕಾರೇಣ ಹಣ ಮಾಡು ಝಣ ಝಣ', 'ಡಿಂಗ್‌ಡಾಂಗ್ ಬಾಸನ ದಿನಚರಿ' 'ಅತ್ತೆಗೆ ಸೊಸೆ ಕೊಟ್ಟ ಗೂಸ', 'ಅಯ್ಯಾ ಎಂದರೆ ನರಕ, ಎಲವೋ ಎಂದರೆ ಸ್ವರ್ಗ' ಮುಂತಾದ ಜನಪ್ರಿಯ ಸೀರಿಯಲ್‌ಗಳನ್ನು ನೋಡಿದವರು ಕೂಡಲೇ ಭ್ರಷ್ಟರು, ವಿಕೃತರು, ಲೂಸುಗಳು ಆಗಿ ಮಾರ್ಪಾಟಾಗುತ್ತಿದ್ದರು.

ಹೀಗಿರುವಾಗ ಆ ನಗರಕ್ಕೆ ಒಬ್ಬ ವಿಶೇಷ ಮನುಷ್ಯ ಪ್ರವೇಶ ಕೊಟ್ಟ. ತನ್ನದು ಆಧ್ಯಾತ್ಮಿಕ ಸಿದ್ಧಿ ಎಂದು ಹೇಳಿಕೊಂಡ. ಜನರು ಆತನನ್ನು ಪ್ರವಾದಿ ಎನ್ನತೊಡಗಿದರು. ಯಾವಾಗಲೂ ತ್ರೀ ಪೀಸ್ ಸೂಟಿನಲ್ಲಿರುತ್ತಿದ್ದ ಆತ ತನ್ನನ್ನು ಆಧುನಿಕ ಎಂದು ವಿವರಿಸಿಕೊಳ್ಳುತ್ತಿದ್ದ. ಆತನ ಮಾತಿನ ಮೋಡಿಗೆ ಮರುಳಾಗದವರೇ ಇರಲಿಲ್ಲ. ಹಲವಾರು ಭಾಷೆಗಳಲ್ಲಿ ವ್ಯವಹರಿಸಬಲ್ಲವನಾಗಿದ್ದ. ಹಿಂದಿನ ಸಾವಿರಾರು ಧರ್ಮಗುರು, ಜಗದ್ಗುರುಗಳಂತಲ್ಲದೆ ಈತ ತುಂಬಾ ವಿಶೇಷವೆಂದು ತಿಳಿಯಲಾಗಿತ್ತು. ಆತನನ್ನು ನರಮಾನವ ಎಂದು ತಿಳಿಯುವುದು ಪಾಪವೆಂದು ಭಾವಿಸಲಾಗಿತ್ತು. ಅವನ ಪಾರಮ್ಯವನ್ನರಿಯುವುದು ಮಾನವನ ಜ್ಞಾನಕ್ಕೆ ಸಾಧ್ಯವಿಲ್ಲವೆಂದು ಪತ್ರಿಕೆ, ದೂರದರ್ಶನ, ಸಾಮಾಜಿಕ ಜಾಲತಾಣಗಳಲ್ಲಿ ತಲೆ ಚಿಟ್ಟು ಹಿಡಿಯುವಂತೆ ಪ್ರಚಾರ ಮಾಡಲಾಯಿತು.

ಪ್ರವಾದಿ ನಗರಕ್ಕೆ ಆಗಮಿಸಿದ ಸ್ವಲ್ಪ ದಿನದಲ್ಲಿಯೇ ನಗರಕ್ಕೆ ನಗರವೇ ತಲ್ಲಣಿಸಿ ಹೋಗುವಂತಹ ಘಟನೆಯೊಂದು ಜರುಗಿತು. ಆ ನಗರದಲ್ಲಿಯೇ ಹುಟ್ಟಿ ಬೆಳೆದಿದ್ದ 'ಜೀನಿಯಸ್' ಎಂಬ ಪಾದರಸದಂಥ ಯುವಕನಿದ್ದ. ಅವನು ಕ್ರಿಕೆಟ್ ಜೀನಿಯಸ್ ಆಗಿದ್ದ. ತಬ್ಬಲಿಯಾದ ಅವನಿಗೆ ಹಿಂದಿರಲಿಲ್ಲ, ಮುಂದಿರಲಿಲ್ಲ.